436 ಶ್ರೀ ಆನಂದ ಸಿಂಗ್ (ವಿಜಯನಗರ ಬಳ್ಳಾರಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಗುರುತಿಸಲಾದ ಮಾಜಿ ದೇವದಾಸಿಯರ ಸಂಖ್ಯೆ ಎಷ್ಟು?

ಆ) 1993–94ನೇ ಸಾಲಿನ ನಂತರ ಮಾಜಿ ದೇವದಾಸಿಯರನ್ನು ಗುರುತಿಸಿ ಘೋಷಿಸಲಾಗಿದೆಯೇ;

ಇ) ಹೊಸಪೇಟೆ ತಾಲ್ಲೂಕಿನಲ್ಲಿ 2007–08ನೇ ಸಾಲಿಗೆ ಗುರುತಿಸಿ ಕಳುಹಿಸಲಾದ 2671 ದೇವದಾಸಿಯರ ಘೋಷಣೆಯಾಗಿರುವುದಿಲ್ಲ ಏಕೆ?

ಈ) ದೇವದಾಸಿಯರನ್ನು ಗುರುತಿಸಲು ಇರಬೇಕಾದ ಮಾನದಂಡಗಳೇನು;

ಉ) ದೇವದಾಸಿಯರಿಗೆ ರೂಪಿಸಲಾಗಿರುವ ಯೋಜನೆಗಳು ಯಾವುವು? ಹೊಸ ಯೋಜನೆ ರೂಪಿಸಲು ಸರ್ಕಾರದ ಕ್ರಮಗಳಾವುವು?

ಶ್ರೀ ಪಿ.ಎನ್. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) 1993–94ನೇ ಸಾಲಿನಲ್ಲಿ ಒಟ್ಟು ಗುರುತಿಸಲಾದ ಮಾಜಿ ದೇವದಾಸಿಯರ ಸಂಖ್ಯೆ: 22873 ಹೊಸದಾಗಿ 2007–08ನೇ ಸಾಲಿನಲ್ಲಿ 28881 ಮಾಜಿ ದೇವದಾಸಿಯರನ್ನು ಗುರುತಿಸಲಾಗಿದ್ದು ಮರು ಪರಿಶೀಲನೆ ಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಇಲ್ಲ.

ಇ) 2007–08ನೇ ಸಾಲಿನಲ್ಲಿ ಹೊಸಪೇಟೆ ತಾಲ್ಲೂಕಿನಲ್ಲಿ 2066 ಮಾಜಿ ದೇವದಾಸಿಯರನ್ನು ಗುರುತಿಸಲಾಗಿರುತ್ತದೆ. ಆದರೆ, ಗುರುತಿಸಲಾದ ಈ ಸಂಖ್ಯೆಯಲ್ಲಿ ಕಡಿಮೆ ವಯಸ್ಸಿನವರು, ಜೋಗುತಿಯರು, ಮದುವೆಯಾಗಿ ಗಂಡನನ್ನು ಹೊಂದಿರುವವರನ್ನು ಸಹ ಸೇರಿಸಿದ್ದರಿಂದ ಮರು ಪರಿಶೀಲನೆ ಗಾಗಿ ಕ್ರಮವಹಿಸಲಾಗಿದೆ. ಆದ್ದರಿಂದ 2007–08ನೇ ಸಾಲಿನಲ್ಲಿ ಗುರುತಿಸ ಲಾದ ಮಾಜಿ ದೇವದಾಸಿಯರನ್ನು ಘೋಷಿಸಿರುವುದಿಲ್ಲ.

ಈ) ಮಾಜಿ ದೇವದಾಸಿಯರನ್ನು ಗುರುತಿಸಲು ಇರಬೇಕಾದ ಮಾನದಂಡಗಳು ಈ ಕೆಳಕಾಣಿಸಿದಂತಿವೆ :

- ❖ ಜನ್ಮ ದಿನಾಂಕವನ್ನು ಖಾತರಿಪಡಿಸಿಕೊಳ್ಳಲು ಜನನ ಪ್ರಮಾಣ ಪತ್ರ/ವಯಸ್ಸು ರುಜುವಾತು ಧೃಢೀಕರಣ ಪತ್ರ.
- ❖ ಈ ಪದ್ಧತಿ ವಂಶ ಪಾರ್ಯಂಪರ್ಯವೇ ಅಥವಾ ಇತ್ತೀಚೆಗೆ ಅನುಸರಿಸುತ್ತಿರುವರೆ ಎಂಬುದರ ಬಗ್ಗೆ ಕೌಟುಂಬಿಕ ಹಿನ್ನೆಲೆಯ ಪರಿಶೀಲನೆ.
- ❖ ಸಮರ್ಪಣೆಗೆ ಕಾರಣ, ಸಮರ್ಪಣೆಯಾಗುವ ವೇಳೆಯಲ್ಲಿ ಹೆಣ್ಣು ಮಗುವಿಗೆ ಗುರುತು ಅಥವಾ ಮುದ್ರೆ ಹಾಕಿರುವ ಬಗ್ಗೆ ಪರಿಶೀಲನೆ.
- ❖ ಸಮರ್ಪಣೆಯಾಗುವ ವೇಳೆಯಲ್ಲಿ ದೇವರಿಗೆ ಅರ್ಪಿಸಿ ಹೆಣ್ಣು ಮಗುವಿಗೆ ಮುತ್ತು ಕಟ್ಟಿರುವ ಬಗ್ಗೆ ಪರಿಶೀಲನೆ.
- ❖ ಸಮರ್ಪಣೆ ಆದ ಮೇಲೆ ಮದುವೆಯಾಗದಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
- ❖ ಮಕ್ಕಳ ಹೆಸರಿನ ಮುಂದೆ ತಂದೆ ಹೆಸರು ಸೇರಿಸದೆ ಇರುವ ಬಗ್ಗೆ ಪರಿಶೀಲನೆ.

ಊ) ಮಾಜಿ ದೇವದಾಸಿಯರಿಗಾಗಿ ಈ ಕೆಳಕಾಣಿಸಿದ ಯೋಜನೆಗಳನ್ನು ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿದೆ.

- ❖ ಜಾತ್ರಾ ಜಾಗೃತಿ ಕಾರ್ಯಕ್ರಮ
- ❖ ಆರೋಗ್ಯ ಶಿಬಿರಗಳು
- ❖ ಆದಾಯ ಉತ್ಪನ್ನಕರ ಚಟುವಟಿಕೆ
- ❖ ಮಾಸಾಶನ
- ❖ ಸ್ವಸಹಾಯ ಗುಂಪುಗಳ ರಚನೆ
- ❖ ಮಾಜಿ ದೇವದಾಸಿಯರಿಂದಲೆ ರಚಿಸಲಾದ ಸ್ವಸಹಾಯ ಗುಂಪುಗಳಿಗೆ ಸುತ್ತುನಿಧಿ.
- ❖ ಸ್ವಸಹಾಯ ಗುಂಪಿನ ಸದಸ್ಯರುಗಳಿಗೆ ತರಬೇತಿ
- ❖ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಮೈಕ್ರೊ ಫೈನಾನ್ಸ್ (ಕಿರುಸಾಲ)

❖ ನಿವೇಶನವುಳ್ಳ ವಸತಿ ರಹಿತ ಮಾಜಿ ದೇವದಾಸಿಯರಿಗೆ ವಸತಿ ಯೋಜನೆ

ರಾಜ್ಯದಲ್ಲಿರುವ ಹಜ್ ಯಾತ್ರಿಕರುಗಳ ಸಂಖ್ಯೆ ಮತ್ತು ಸೌಕರ್ಯಗಳ ವಿವರ

516 ಶ್ರೀ ಹ್ಯಾರಿಸ್ ಎನ್.ಎ. ಎಂಎಲ್ಎ : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2007–08 ಮತ್ತು 2008–09ನೇ ಸಾಲಿನಲ್ಲಿ ಹಜ್ ಯಾತ್ರೆಗೆ ಆಯ್ಕೆಯಾದ ಯಾತ್ರಿಕರುಗಳ ಸಂಖ್ಯೆ ಎಷ್ಟು; ಯಾತ್ರಾ ಸೌಲಭ್ಯವನ್ನು ಭಯಸಿ ಅರ್ಜಿಗಳನ್ನು ಸಲ್ಲಿಸಿದವರ ಸಂಖ್ಯೆ ಎಷ್ಟು;

ಆ) ಯಾತ್ರಾರ್ಥಿಗಳ ಮನವಿ ಸಂಖ್ಯೆಗಳನ್ನು ಆಧರಿಸಿ ಮುಂದಿನ ವರ್ಷಗಳಲ್ಲಿ ಸಂಖ್ಯಾ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ. ಇದ್ದಲ್ಲಿ, ಆ ಕುರಿತಾದ ವಿವರಗಳೇನು,

ಇ) ಪ್ರಸ್ತುತ ಸರ್ಕಾರದವರು ಯಾತ್ರಿಕರುಗಳಿಗೆ ಒದಗಿಸಿ ಕೊಡುತ್ತಿರುವ ಯಾತ್ರಾ ಸೌಲಭ್ಯ ಕೊಡುತ್ತಿರುವ ಯಾತ್ರಾ ಸೌಲಭ್ಯಗಳೇನು?

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯದಿಂದ ಆಯ್ಕೆಯಾದ ಹಾಗೂ ಅರ್ಜಿ ಸಲ್ಲಿಸಿದ ಅಜಿದಾರರ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಅರ್ಜಿ ಸಲ್ಲಿಸಿದವರ ಸಂಖ್ಯೆ	ಖುರ್ರಾದಲ್ಲಿ ಆಯ್ಕೆಯಾದವರ ಸಂಖ್ಯೆ	ಯಾತ್ರೆಗೆ ಪಯಣಿಸಿದವರ ಸಂಖ್ಯೆ
2007–08	12929	6307	6653
2008–09	18102	5924	6964

ಆ) 2001ನೇ ಜನಗಣತಿಯ ಮುಸ್ಲಿಂ ಜನಸಂಖ್ಯೆಯ ಅನ್ವಯ ಮುಂಬೈನ ಕೇಂದ್ರ ಹಜ್ ಸಮಿತಿಯು ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯದ ಅನುಮೋದನೆಯೊಂದಿಗೆ ರಾಜ್ಯಗಳ ಹಜ್ ಯಾತ್ರಿಕರ